**1. ಘಟಕಾವಾರು ಅಂಕ ಹಂಚಿಕೆ** **7th First sem ವಿಜ್ಞಾನ 2. ಉದ್ದೇಶವಾರು ಅಂಕ ಹಂಚಿಕೆ**

| ಕ್ರ. ಸಂ | ಘಟಕ | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ಸಸ್ಯಗಳಲ್ಲಿ ಪೋಷಣೆ | 6 | 7 | 17.5% |
| 2 | ಪ್ರಾಣಿಗಳಲ್ಲಿ ಪೋಷಣೆ | 3 | 7 | 17.5% |
| 3 | ಎಳೆಯಿಂದ ಬಟ್ಟೆ | 2 | 3 | 7.5% |
| 4 | ಉಷ್ಣ | 2 | 3 | 7.5% |
| 5 | ಆಮ್ಲಗಳು ಪ್ರತ್ಯಾಮ್ಲಗಳು ಮತ್ತು ಲವಣಗಳು | 2 | 4 | 10% |
| 6 | ಭೌತ ಮತ್ತು ರಾಸಾಯನಿಕ ಬದಲಾವಣೆಗಳು | 2 | 3 | 7.5% |
| 7 | ಹವಾಮಾನ ವಾಯುಗುಣ ಮತ್ತು ವಾಯುಗುಣಕ್ಕೆ ಪ್ರಾಣಿಗಳ ಹೊಂದಾಣಿಕೆ | 3 | 4 | 10% |
| 8 | ಮಾರುತಗಳು ಬಿರುಗಾಳಿಗಳು ಮತ್ತು ಚಂಡಮಾರುತಗಳು | 2 | 3 | 7.5% |
| 9 | ಮಣ್ಣು | 2 | 6 | 15% |
| | ಒಟ್ಟು | 24 | 40 | 100% |

| ಕ್ರ. ಸಂ | ಉದ್ದೇಶಗಳು | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ಜ್ಞಾನ | 9 | 10 | 25% |
| 2 | ತಿಳಿವಳಿಕೆ | 10 | 18 | 45% |
| 3 | ಅಭಿವ್ಯಕ್ತಿ /ಅನ್ವಯ | 4 | 8 | 20% |
| 4 | ಪ್ರಶಂಸೆ / ಕೌಶಲ | 1 | 4 | 10% |
| | ಒಟ್ಟು | 24 | 40 | 100% |

| ಕ್ರ. ಸಂ | ಪ್ರಶ್ನೆಯ ವಿಧ | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ವಸ್ತುನಿಷ್ಟ ಪ್ರಶ್ನೆ | 8 | 8 | 20% |
| 2 | ಕಿರು ಉತ್ತರ ಪ್ರಶ್ನೆ | 14 | 24 | 60% |
| 3 | ದೀರ್ಘ ಉ. ಪ್ರಶ್ನೆ | 2 | 8 | 20% |
| | ಒಟ್ಟು | 24 | 40 | 100% |

**3. ಪ್ರಶ್ನಾವಾರು ಅಂಕ ಹಂಚಿಕೆ**

**4. ಕಠಿಣತಾವಾರು ಅಂಕ ಹಂಚಿಕೆ**

| ಕ್ರ. ಸಂ | ಪ್ರಶ್ನೆಯ ವಿಧ | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ಸುಲಭ | 8 | 8 | 20% |
| 2 | ಸಾಧಾರಣ | 14 | 24 | 60% |
| 3 | ಕಠಿಣ | 2 | 8 | 20% |
| | ಒಟ್ಟು | 24 | 40 | 100% |

# ನೀಲನಕಾಶೆ

| ಕ್ರ. ಸಂ | ಉದ್ದೇಶಗಳು ಘಟಕಗಳು | ಜ್ಞಾನ | | | ತಿಳಿವಳಿಕೆ | | | ಅಭಿವ್ಯಕ್ತಿ/ಅನ್ವಯ | | | ಪ್ರಶಂಸೆ/ಕೌಶಲ | | | ಒಟ್ಟು | |
|---|---|---|---|---|---|---|---|---|---|---|---|---|---|---|---|
| | | ವ. | ಕಿ. | ದೀ. | ವ. | ಕಿ. | ದೀ. | ವ. | ಕಿ. | ದೀ. | ವ. | ಕಿ. | ದೀ. | ಪ್ರಶ್ನೆ | ಅಂಕ |
| 1 | ಸಸ್ಯಗಳಲ್ಲಿ ಪೋಷಣೆ | 1(1) | | | 4(1) | 1(2) | | | | | | | | 6 | 7 |
| 2 | ಪ್ರಾಣಿಗಳಲ್ಲಿ ಪೋಷಣೆ | 1(1) | | | | | | | 1(2) | | | | 1(4) | 3 | 7 |
| 3 | ಎಳೆಯಿಂದ ಬಟ್ಟೆ | | 1(1) 1(2) | | | | | | | | | | | 2 | 3 |
| 4 | ಉಷ್ಣ | | 1(1) | | | | | | 1(2) | | | | | 2 | 3 |
| 5 | ಆಮ್ಲಗಳು ಪ್ರತ್ಯಾಮ್ಲಗಳು ಮತ್ತು ಲವಣಗಳು | | | | | 1(2) | | | 1(2) | | | | | 2 | 4 |
| 6 | ಭೌತ ಮತ್ತು ರಾಸಾಯನಿಕ ಬದಲಾವಣೆಗಳು | | 1(1) | | | 1(2) | | | | | | | | 2 | 3 |
| 7 | ಹವಾಮಾನ ವಾಯುಗುಣ ಮತ್ತು ವಾಯುಗುಣಕ್ಕೆ ಪ್ರಾಣಿಗಳ ಹೊಂದಾಣಿಕೆ | 1(1) | 1(1) | | | 1(2) | | | | | | | | 3 | 4 |
| 8 | ಮಾರುತಗಳು ಬಿರುಗಾಳಿಗಳು ಮತ್ತು ಚಂಡಮಾರುತಗಳು | 1(1) | | | | | | | 1(2) | | | | | 2 | 3 |
| 9 | ಮಣ್ಣು | | | | | 1(2) | 1(4) | | | | | | | 2 | 6 |
| | | 4(4) | 5(6) | | 4(4) | 5(10) | 1(4) | | 4(8) | | | | 1(4) | 24 | |
| | ಒಟ್ಟು | 9(10) | | | 10(18) | | | 4(8) | | | 1(4) | | | | 40 |

**ಸೂಚನೆ :–** 1.ವ= ವಸ್ತುನಿಷ್ಟ ಪ್ರಶ್ನೆ, ಕಿ= ಕಿರುಉತ್ತರ ಪ್ರಶ್ನೆ, ದೀ= ದೀರ್ಘ ಉತ್ತರ ಪ್ರಶ್ನೆ 2.**ಪ್ರಶ್ನೆ(ಅಂಕ)**

ತರಗತಿ:7 ಪ್ರಶ್ನಾವಾರು ವಿಶ್ಲೇಷಣೆ ವಿಷಯ :ವಿಜ್ಞಾನ

| ಪ್ರಶ್ನೆ ಸಂ. | ಘಟಕ | ಉದ್ದಿಷ್ಠ | ನಿರ್ದಿಷ್ಠ | ಅಂಕ | ಪ್ರಶ್ನೆಯ ರೂಪ | ಕ್ಲಿಷ್ಟತೆ | ಸಮಯ |
|---|---|---|---|---|---|---|---|
| 1 | ಸಸ್ಯಗಳಲ್ಲಿ ಪೋಷಣೆ | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 2 | ಪ್ರಾಣಿಗಳಲ್ಲಿ ಪೋಷಣೆ | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸಾಧಾರಣ | 2 |
| 3 | ಹವಾಮಾನ ವಾಯುಗುಣ ಮತ್ತು ವಾಯುಗುಣಕ್ಕೆ ಪ್ರಾಣಿಗಳ ಹೊಂದಾಣಿಕೆ | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 4 | ಮಾರುತಗಳು ಬಿರುಗಾಳಿಗಳು ಮತ್ತು ಚಂಡಮಾರುತಗಳು | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 5 | ಸಸ್ಯಗಳಲ್ಲಿ ಪೋಷಣೆ | ತಿಳಿವಳಿಕೆ | ಹೊಂದಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 6 | ಸಸ್ಯಗಳಲ್ಲಿ ಪೋಷಣೆ | ತಿಳಿವಳಿಕೆ | ಹೊಂದಿಸುತ್ತಾನೆ | 1 | ವಸ್ತುನಿಷ್ಠ | ಸಾಧಾರಣ | 2 |
| 7 | ಸಸ್ಯಗಳಲ್ಲಿ ಪೋಷಣೆ | ತಿಳಿವಳಿಕೆ | ಹೊಂದಿಸುತ್ತಾನೆ | 1 | ವಸ್ತುನಿಷ್ಠ | ಸಾಧಾರಣ | 2 |
| 8 | ಸಸ್ಯಗಳಲ್ಲಿ ಪೋಷಣೆ | ತಿಳಿವಳಿಕೆ | ಹೊಂದಿಸುತ್ತಾನೆ | 1 | ವಸ್ತುನಿಷ್ಠ | ಸಾಧಾರಣ | 2 |
| 9 | ಎಳೆಯಿಂದ ಬಟ್ಟೆ | ಜ್ಞಾನ | ಸ್ಮರಿಸುತ್ತಾನೆ | 1 | ಕಿರುಉತ್ತರ | ಸಾಧಾರಣ | 2 |
| 10 | ಉಷ್ಣ | ಜ್ಞಾನ | ಸ್ಮರಿಸುತ್ತಾನೆ | 1 | ಕಿರುಉತ್ತರ | ಸಾಧಾರಣ | 2 |
| 11 | ಭೌತ ಮತ್ತು ರಾಸಾಯನಿಕ ಬದಲಾವಣೆಗಳು | ಜ್ಞಾನ | ಸ್ಮರಿಸುತ್ತಾನೆ | 1 | ಕಿರುಉತ್ತರ | ಸಾಧಾರಣ | 2 |
| 12 | ಹವಾಮಾನ ವಾಯುಗುಣ ಮತ್ತು ವಾಯುಗುಣಕ್ಕೆ ಪ್ರಾಣಿಗಳ ಹೊಂದಾಣಿಕೆ | ಜ್ಞಾನ | ಸ್ಮರಿಸುತ್ತಾನೆ | 1 | ಕಿರುಉತ್ತರ | ಸಾಧಾರಣ | 2 |
| 13 | ಸಸ್ಯಗಳಲ್ಲಿ ಪೋಷಣೆ | ತಿಳಿವಳಿಕೆ | ವ್ಯತ್ಯಾಸಿಸುತ್ತಾನೆ | 2 | ಕಿರುಉತ್ತರ | ಸಾಧಾರಣ | 3 |
| 14 | ಪ್ರಾಣಿಗಳಲ್ಲಿ ಪೋಷಣೆ | ಅನ್ವಯ | ಯೋಚಿಸುತ್ತಾನೆ | 2 | ಕಿರುಉತ್ತರ | ಸಾಧಾರಣ | 3 |
| 15 | ಎಳೆಯಿಂದ ಬಟ್ಟೆ | ಜ್ಞಾನ | ಸ್ಮರಿಸುತ್ತಾನೆ | 2 | ಕಿರುಉತ್ತರ | ಸಾಧಾರಣ | 3 |
| 16 | ಉಷ್ಣ | ಅನ್ವಯ | ಯೋಚಿಸುತ್ತಾನೆ | 2 | ಕಿರುಉತ್ತರ | ಸುಲಭ | 3 |
| 17 | ಆಮ್ಲಗಳು ಪ್ರತ್ಯಾಮ್ಲಗಳು ಮತ್ತು ಲವಣಗಳು | ತಿಳಿವಳಿಕೆ | ವ್ಯತ್ಯಾಸಿಸುತ್ತಾನೆ | 2 | ಕಿರುಉತ್ತರ | ಸುಲಭ | 3 |
| 18 | ಆಮ್ಲಗಳು ಪ್ರತ್ಯಾಮ್ಲಗಳು ಮತ್ತು ಲವಣಗಳು | ಅನ್ವಯ | ಯೋಚಿಸುತ್ತಾನೆ | 2 | ಕಿರುಉತ್ತರ | ಸುಲಭ | 3 |
| 19 | ಭೌತ ಮತ್ತು ರಾಸಾಯನಿಕ ಬದಲಾವಣೆಗಳು | ತಿಳಿವಳಿಕೆ | ವಿವರಿಸುತ್ತಾನೆ | 2 | ಕಿರುಉತ್ತರ | ಸುಲಭ | 5 |
| 20 | ಹವಾಮಾನ ವಾಯುಗುಣ ಮತ್ತು ವಾಯುಗುಣಕ್ಕೆ ಪ್ರಾಣಿಗಳ ಹೊಂದಾಣಿಕೆ | ತಿಳಿವಳಿಕೆ | ವಿವರಿಸುತ್ತಾನೆ | 2 | ಕಿರುಉತ್ತರ | ಕಠಿಣ | 5 |
| 21 | ಮಾರುತಗಳು ಬಿರುಗಾಳಿಗಳು ಮತ್ತು ಚಂಡಮಾರುತಗಳು | ಅನ್ವಯ | ಯೋಚಿಸುತ್ತಾನೆ | 2 | ಕಿರುಉತ್ತರ | ಸುಲಭ | 5 |
| 22 | ಮಣ್ಣು | ತಿಳಿವಳಿಕೆ | ವಿವರಿಸುತ್ತಾನೆ | 2 | ಕಿರುಉತ್ತರ | ಸಾಧಾರಣ | 5 |
| 23 | ಮಣ್ಣು | ತಿಳಿವಳಿಕೆ | ವಿವರಿಸುತ್ತಾನೆ | 4 | ದೀರ್ಘಉತ್ತರ | ಕಠಿಣ | 6 |
| 24 | ಪ್ರಾಣಿಗಳಲ್ಲಿ ಪೋಷಣೆ | ಕೌಶಲ | ಚಿತ್ರ ಬಿಡಿಸುತ್ತಾನೆ | 4 | ದೀರ್ಘಉತ್ತರ | ಕಠಿಣ | 6 |

# ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ______________.______________ ತಾ.

ಪ್ರಥಮ ಸಂಕಲನಾತ್ಮಕ ಮೌಲ್ಯಮಾಪನ – ಸೆಪ್ಟಂಬರ್ 2023 ಸಮಯ:90ನಿ.

ತರಗತಿ: 7 ನೇ ವಿಷಯ : ವಿಜ್ಞಾನ ಅಂಕಗಳು:40

## I. ಬಿಟ್ಟ ಸ್ಥಳಗಳನ್ನು ಸರಿಯಾದ ಉತ್ತರಗಳಿಂದ ತುಂಬಿ 4X1=4

1) ದ್ಯುತಿಸಂಶ್ಲೇಷಣೆಯಲ್ಲಿ ಸೌರಶಕ್ತಿಯನ್ನು ಹಿಡಿದಿಟ್ಟುಕೊಳ್ಳುವ ವರ್ಣಕ ____________
2) ಮನುಷ್ಯನ ದೇಹದಲ್ಲಿ ಅತ್ಯಂತ ದೊಡ್ಡ ಗ್ರಂಥಿ ____________
3) ದೀರ್ಘಕಾಲಾವಧಿಯ ಸಮಯದಲ್ಲಿ ತೆಗೆದುಕೊಂಡ ಹವಾಮಾನದ ಸರಾಸರಿಯನ್ನು __________ಎನ್ನುವರು.
4) ಮಾರುತ ಎಂದರೆ ___________ಗಾಳಿ.

## II. ಹೊಂದಿಸಿ ಬರೆಯಿರಿ :– 4X1=4

| | |
|---|---|
| 5) ಕ್ಲೋರೋಫಿಲ್ | ಪರಾವಲಂಬಿ |
| 6) ನೈಟ್ರೋಜನ್ | ಪರಪೋಷಕಗಳು |
| 7) ಕಸ್ಕ್ಯೂಟ | ಬ್ಯಾಕ್ಟೀರಿಯಾ |
| 8) ಪ್ರಾಣಿಗಳು | ಎಲೆ |

## III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ :– 4X1=4

9) ಉಣ್ಣೆಯನ್ನು ಉತ್ಪಾದಿಸುವ ಎರಡು ಪ್ರಾಣಿಗಳನ್ನು ಹೆಸರಿಸಿ.
10) ಮಾನವನ ದೇಹದ ಸಾಮಾನ್ಯ ತಾಪ ಎಷ್ಟು ?
11) ಕಬ್ಬಿಣ ತುಕ್ಕು ಹಿಡಿಯುವುದು ಯಾವ ವಿಧದ ಬದಲಾವಣೆ ?
12) ಒಂದು ಪ್ರದೇಶದ ಹವಾಮಾನವನ್ನು ನಿರ್ಧರಿಸುವ ಎರಡು ಅಂಶಗಳನ್ನು ಹೆಸರಿಸಿ.

## IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ :– 10X2=20

13) ಪರಾವಲಂಬಿ ಮತ್ತು ಕೊಳೆತಿನಿಗಳ ನಡುವಣ ವ್ಯತ್ಯಾಸವನ್ನು ತಿಳಿಸಿ.
14) ನಮಗೆ ಗ್ಲುಕೋಸ್‌ನಿಂದ ತಕ್ಷಣ ಶಕ್ತಿ ಸಿಗುವುದು ಏಕೆ?
15) ಉಣ್ಣೆ ಸಂಸ್ಕರಣೆಯ ವಿವಿಧ ಹಂತಗಳನ್ನು ಹೆಸರಿಸಿ.
16) ಚಳಿಗಾಲದಲ್ಲಿ ಒಂದೇ ಪದರದ ದಪ್ಪ ಬಟ್ಟೆಯನ್ನು ಧರಿಸುವುದಕ್ಕಿಂತ ಹಲವು ಪದರಗಳ ಬಟ್ಟೆ ಧರಿಸುವುದು ನಮ್ಮನ್ನು ಬೆಚ್ಚಗೆ ಇಡುತ್ತದೆ ಏಕೆ?
17) ಆಮ್ಲ ಮತ್ತು ಪ್ರತ್ಯಾಮ್ಲಗಳ ನಡುವಣ ವ್ಯತ್ಯಾಸಗಳನ್ನು ತಿಳಿಸಿ.
18) ನೀವು ಆಮ್ಲೀಯತೆಯಿಂದ ನರಳುವಾಗ ಆಮ್ಲರೋಧಕ ಮಾತ್ರೆಯನ್ನು ತೆಗೆದುಕೊಳ್ಳುವಿರಿ ಏಕೆ?
19) ಕಬ್ಬಿಣದ ಗೇಟ್‌ಗೆ ಬಣ್ಣ ಬಳಿಯುವುದರಿಂದ ತುಕ್ಕು ಹಿಡಿಯುವುದನ್ನು ಹೇಗೆ ತಡೆಗಟ್ಟಬಹುದು?
20) ಉಷ್ಣವಲಯದ ಮಳೆ ಕಾಡಿನ ಪರಿಸ್ಥಿತಿಗೆ ಆನೆಯು ಹೇಗೆ ಹೊಂದಾಣಿಕೆ ಮಾಡಿಕೊಂಡಿದೆ?
21) ಚಂಡಮಾರುತವು ನಿಮ್ಮ ಹಳ್ಳಿ/ ನಗರವನ್ನು ಸಮೀಪಿಸುವಾಗ ನಿಮ್ಮ ನೆರೆಹೊರೆಯವರಿಗೆ ನೀವು ಹೇಗೆ ಸಹಾಯ ಮಾಡುವಿರಿ?
22) ಜೇಡಿಯುಕ್ತ ಮಣ್ಣು ಬೆಳೆಗಳಿಗೆ ಹೇಗೆ ಉಪಯುಕ್ತವಾಗಿದೆ?

## V. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :– 2X4=8

23) ಮಣ್ಣಿನ ಮಾಲಿನ್ಯ ಮತ್ತು ಮಣ್ಣಿನ ಸವೆತವನ್ನು ತಡೆಗಟ್ಟಲು ಹೇಗೆ ಸಾಧ್ಯ ಎಂಬುದನ್ನು ವಿವರಿಸಿ.
24) ಮಾನವನ ಜೀರ್ಣಾಂಗ ವ್ಯೂಹದ ಅಂದವಾದ ಚಿತ್ರ ಬರೆದು ಭಾಗಗಳನ್ನು ಗುರುತಿಸಿ.

# ವಿಜ್ಞಾನ ಮಾದರಿ ಉತ್ತರ ಪತ್ರಿಕೆ

1. ಕ್ಲೋರೋಫಿಲ್
2. ಯಕೃತ್
3. ವಾಯುಗುಣ
4. ಚಲಿಸುವ
5. ಎಲೆ
6. ಬ್ಯಾಕ್ಟೀರಿಯಾ
7. ಪರಾವಲಂಬಿ
8. ಪರ ಪೋಷಕಗಳು
9. ಕುರಿ, ಒಂಟೆ, ಯಾಕ್
10. 37 ಡಿಗ್ರಿ ಸೆಲ್ಸಿಯಸ್
11. ರಾಸಾಯನಿಕ ಬದಲಾವಣೆ
12. ತಾಪ, ಮಳೆ, ಆದ್ರತೆ

13.

| **ಪರಾವಲಂಬಿಗಳು** | **ಕೊಳೆತಿನಿಗಳು** |
|---|---|
| ಜೀವಂತವಿರುವ ಆತಿಥೇಯ ಸಸ್ಯದಿಂದ ಉಪಯುಕ್ತ ಪೋಷಕಗಳನ್ನು ಕಸಿದುಕೊಳ್ಳುವ ಕಸ್ಕ್ಯೂಟದಂತಹ ಸಸ್ಯಗಳನ್ನು ಪರಾವಲಂಬಿ ಸಸ್ಯಗಳು ಎನ್ನುವರು. | ಸತ್ತ ಮತ್ತು ಕೊಳೆಯುತ್ತಿರುವ ವಸ್ತುವಿನಿಂದ ಪೋಷಕಗಳನ್ನು ಪಡೆಯುವ ಜೀವಿಗಳಿಗೆ ಕೊಳೆತಿನಿಗಳು ಎನ್ನುವರು. |
| ಉದಾ : ಕಸ್ಕ್ಯೂಟ್ | ಉದಾ : ಅಣಬೆ, ಶಿಲೀಂಧ್ರಗಳು |

14. ಗ್ಲೂಕೋಸ್ ಒಂದು ಸರಳ ಸಕ್ಕರೆಯಗಿದ್ದು, ಶಕ್ತಿ ಬಿಡುಗಡೆಗೆ ಮಾಡಲು ಕಾರ್ಬೋಹೈಡ್ರೇಟ್‌ಗಳಂತೆ ಅದು ಕರಗುವ ಅವಶ್ಯಕತೆ ಇರುವುದಿಲ್ಲ. ಗ್ಲೂಕೋಸ್ ಜೀವಕೋಶಗಳಲ್ಲಿ ಆಮ್ಲಜನಕದೊಂದಿಗೆ ವರ್ತಿಸಿ ನೀರು ಮತ್ತು ಶಕ್ತಿಯನ್ನು ಬಿಡುಗಡೆ ಮಾಡುತ್ತದೆ. ಆದ್ದರಿಂದ ನಮಗೆ ತಕ್ಷಣ ಶಕ್ತಿ ಸಿಗುತ್ತದೆ.

15. ಕತ್ತರಿಸುವುದು, ಉಜ್ಜಿ ಶುಭ್ರಗೊಳಿಸುವುದು, ವಿಂಗಡಿಸುವುದು, ಪುರುಳೆಗಳನ್ನು ಹೆಕ್ಕಿ ತೆಗೆಯುವುದು, ಬಣ್ಣವನ್ನು ಹಾಕುವುದು, ನೂಲಾಗಿ ಸುತ್ತುವುದು.

16. ಚಳಿಗಾಲದಲ್ಲಿ ಒಂದೇ ಪದರದ ದಪ್ಪ ಬಟ್ಟೆಯನ್ನು ಧರಿಸುವುದಕ್ಕಿಂತ ಹಲವು ಪದರಗಳ ಬಟ್ಟೆ ಧರಿಸುವುದು ನಮ್ಮನ್ನು ಬೆಚ್ಚಗೆ ಇಡುತ್ತದೆ ಏಕೆಂದರೆ ಬಟ್ಟೆಗಳ ಪದರಗಳ ನಡುವೆ ಗಾಳಿಯು ತುಂಬಿಕೊಂಡಿರುತ್ತದೆ. ಗಾಳಿಯು ಉಷ್ಣಅವಾಹಕವಾಗಿರುವುದರಿಂದ, ಆ ಗಾಳಿಯು ನಮ್ಮ ದೇಹದ ತಾಪವನ್ನು ಹೊರಗೆ ಹೋಗಲು ಬಿಡುವುದಿಲ್ಲ. ಆದ್ದರಿಂದ ನಮ್ಮ ದೇಹವು ಬೆಚ್ಚಗಿರುತ್ತದೆ.

17.

| **ಆಮ್ಲಗಳು** | **ಪ್ರತ್ಯಾಮ್ಲಗಳು** |
|---|---|
| 1. ಹುಳಿ ರುಚಿಯನ್ನು ಹೊಂದಿರುತ್ತವೆ. | 1. ಕಹಿ ರುಚಿಯನ್ನು ಹೊಂದಿರುತ್ತವೆ. |
| 2. ನೀಲಿ ಲಿಟ್ಮಸ್ ಕಾಗದವನ್ನು ಕೆಂಪು ಬಣ್ಣಕ್ಕೆ ಪರಿವರ್ತಿಸುತ್ತವೆ. | 2. ಕೆಂಪು ಲಿಟ್ಮಸ್ ಕಾಗದವನ್ನು ನೀಲಿ ಬಣ್ಣಕ್ಕೆ ಪರಿವರ್ತಿಸುತ್ತವೆ. |
| 3. ಕೆಂಪು ಲಿಟ್ಮಸ್ ಕಾಗದದ ಬಣ್ಣವನ್ನು ಬದಲಾಯಿಸುವುದಿಲ್ಲ. | 3. ನೀಲಿ ಲಿಟ್ಮಸ್ ಕಾಗದದ ಬಣ್ಣವನ್ನು ಬದಲಾಯಿಸುವುದಿಲ್ಲ. |
| 4. ಅರಿಶಿನದ ಸೂಚಕಗಳ ಬಣ್ಣವನ್ನು ಬದಲಾಯಿಸುವುದಿಲ್ಲ. | 4. ಅರಿಶಿನ ಸೂಚಕಗಳ ಬಣ್ಣವನ್ನು ಕೆಂಪು ಬಣ್ಣಕ್ಕೆ ಬದಲಾಯಿಸುತ್ತವೆ. |
| 5. ಹೈಡ್ರೋಜನ್ ಅಯಾನ್ ಹೊಂದಿರುತ್ತವೆ. | 5. ಹೈಡ್ರಾಕ್ಸಿಲ್ ಅಯಾನ್ ಹೊಂದಿರುತ್ತವೆ. |

18. ಆಮ್ಲೀಯತೆಯಿಂದ ನರಳುವಾಗ ಜಠರದಲ್ಲಿ ದುರ್ಬಲ ಹೈಡ್ರೊಕ್ಲೋರಿಕ್ ಆಮ್ಲದ ಪ್ರಮಾಣ ಹೆಚ್ಚಾಗಿರುತ್ತದೆ. ಆಮ್ಲರೋಧಕ ಮಾತ್ರೆಗಳು ಪ್ರತ್ಯಾಮ್ಲೀಯ ಗುಣಗಳನ್ನು ಹೊಂದಿರುತ್ತದೆ. ಜಠರದಲ್ಲಿನ ಆಮ್ಲದೊಂದಿಗೆ ವರ್ತಿಸಿ ತಟಸ್ಥೀಕರಣವನ್ನು ಉಂಟುಮಾಡುವ ಮೂಲಕ ನಮಗೆ ಆಮ್ಲೀಯತೆಯಿಂದ ಪರಿಹಾರವನ್ನು ಕೊಡುತ್ತದೆ.

19. ಕಬ್ಬಿಣದ ಗೇಟ್ ಯಾವಾಗಲೂ ವಾತಾವರಣದ ಗಾಳಿ ಮತ್ತು ನೀರಿನ ಸಂಪರ್ಕದಲ್ಲಿರುವುದರಿಂದ ಬೇಗನೆ ತುಕ್ಕು ಹಿಡಿಯುವ ಸಾಧ್ಯತೆ ಇರುತ್ತದೆ. ಆದರೆ ಇದಕ್ಕೆ ಬಣ್ಣ ಬಳಿಯುವುದರಿಂದ ಕಬ್ಬಿಣವು ನೇರವಾಗಿ ಗಾಳಿ ಮತ್ತು ನೀರಿನ ಸಂಪರ್ಕ ಹೊಂದಲು ಸಾಧ್ಯವಿರುವುದಿಲ್ಲ. ಈ ರೀತಿ ಕಬ್ಬಿಣದ ಗೇಟ್‌ಗೆ ಬಣ್ಣ ಹಚ್ಚುವುದರಿಂದ ತುಕ್ಕು ಹಿಡಿಯುವುದನ್ನು ತಪ್ಪಿಸಬಹುದು.

20. ಎ) ತೀವ್ರ ಘ್ರಾಣಶಕ್ತಿಯನ್ನು ಉಳ್ಳ ಸೊಂಡಿಲನ್ನು ಅದು ನಾಸಿಕದಂತೆ ಉಪಯೋಗಿಸುತ್ತದೆ. ಅದು ಆಹಾರವನ್ನು ಎತ್ತಿಕೊಳ್ಳಲು ಸೊಂಡಿಲನ್ನು ಬಳಸುತ್ತದೆ.

ಬಿ) ಅದರ ದಂತಗಳು ರೂಪಾಂತರಗೊಂಡ ಹಲ್ಲುಗಳಾಗಿದ್ದು, ತಾನು ತಿನ್ನ ಬಯಸುವ ಮರದ ತೊಗಟೆಯನ್ನು ಸೀಳಲು ನೆರವಾಗುತ್ತದೆ.

ಸಿ) ಅದರ ದೊಡ್ಡ ಕಿವಿಗಳು ಸೂಕ್ಷ್ಮ ಸಪ್ಪಳವನ್ನು ಕೇಳಲು ಸಹಕಾರಿಯಾಗಿವೆ. ಅಲ್ಲದೆ ಉಷ್ಣ–ತೇವ ಭರಿತ ಮಳೆಕಾಡಿನ ವಾಯುಗುಣದಲ್ಲಿ ಆನೆಯನ್ನು ತಂಪಾಗಿರಿಸಲು ಕೂಡ ಸಹಾಯ ಮಾಡುತ್ತದೆ.

21.

ಎ) ಅವರಲ್ಲಿರುವ ಜೀವನಾವಶ್ಯಕ ವಸ್ತುಗಳನ್ನು, ಸಾಕು ಪ್ರಾಣಿಗಳನ್ನು, ವಾಹನಗಳನ್ನು ಸುರಕ್ಷಿತವಾದ ಜಾಗಕ್ಕೆ ವರ್ಗಾಯಿಸಲು ಸಹಕಾರ ನೀಡುವುದು.

ಬಿ) ಪರಿಹಾರ ಅಥವಾ ಸುರಕ್ಷಿತ ಪಡೆಯವರು ಸಹಾಯ ಮಾಡಲು ಬಂದ ಅವರಿಗೆ ಅನುಚಿತವಾದ ಬೇಡಿಕೆಗಳನ್ನು ಮಾಡಿಕೊಡಲು ಒತ್ತಾಯಿಸುವುದಿಲ್ಲ.

ಸಿ) ಪ್ರವಾಹದ ನೀರು ನಿಂತ ಜಾಗದಲ್ಲಿರುವ ರಸ್ತೆಗಳ ಮೇಲೆ ವಾಹನ ಚಲಾಯಿಸುವುದನ್ನು ತಡೆಗಟ್ಟುವುದು, ಆ ನೀರನ್ನು ಕುಡಿಯದಂತೆ ನೋಡಿಕೊಳ್ಳುವುದು, ಅಂತಹ ಸಮಯದಲ್ಲಿ ಯಾವುದೇ ವಿದ್ಯುತ್ ಉಪಕರಣಗಳಾಗಲಿ, ಸ್ವಿಚ್‌ಗಳಾಗಲಿ, ಕಂಬಗಳನ್ನಾಗಲಿ ಮುಟ್ಟದಂತೆ ತಾಕೀತು ಮಾಡುವುದು ಇತ್ಯಾದಿ.

22. (ಎ) ಜೇಡಿಯುಕ್ತ ಮಣ್ಣು ಒತ್ತೊತ್ತಾಗಿ ಜೋಡಣೆಗೊಂಡ ಸಣ್ಣ ಕಣಗಳನ್ನು ಹೊಂದಿರುವುದರಿಂದ ಅತಿ ಹೆಚ್ಚು ನೀರನ್ನು ತನ್ನಲ್ಲಿ ಹಿಡಿದಿಟ್ಟುಕೊಳ್ಳಬಲ್ಲದು.

(ಬಿ) ಜೇಡಿಯುಕ್ತ ಮಣ್ಣು ಅತಿ ಹೆಚ್ಚು ಜೈವಿಕ ಅಂಶಗಳನ್ನು ಹೊಂದಿದೆ.

(ಸಿ) ಅತಿ ಹೆಚ್ಚು ನೀರು ಮತ್ತು ಜೈವಿಕ ಅಂಶಗಳನ್ನು ಬಳಸಿಕೊಳ್ಳುವ ಬೆಳೆಗಳಾದ ಗೋಧಿ, ಕಡಲೆ, ಭತ್ತ ಮುಂತಾದವುಗಳನ್ನು ಬೆಳಯಲು ಸೂಕ್ತವಾಗಿದೆ.

**23. ಮಣ್ಣಿನ ಮಾಲಿನ್ಯವನ್ನು ತಡೆಗಟ್ಟುವ ಕ್ರಮಗಳು :**

ಎ) ಪ್ಲಾಸ್ಟಿಕ್‌ಗಳ ಬಳಕೆಯನ್ನು ಕಡಿಮೆ ಮಾಡಬೇಕು ಅಥವಾ ಸಂಪೂರ್ಣ ನಿಷೇಧಿಸಬೇಕು.
ಬಿ) ಗೃಹ ಮತ್ತು ಕೈಗಾರಿಕಾ ತ್ಯಾಜ್ಯಗಳನ್ನು ಹೊರಬಿಡುವ ಮುನ್ನ ರಾಸಾಯನಿಕವಾಗಿ ಸಂಸ್ಕರಿಸಬೇಕು.
ಸಿ) ಕಳೆನಾಶಕಗಳು ಮತ್ತು ಕೀಟನಾಶಕಗಲ ಬಳಕೆಯನ್ನು ಕಡಿಮೆ ಮಾಡಬೇಕು.

ಮಣ್ಣಿನ ಸವೆತವನ್ನು ತಡೆಗಟ್ಟುವ ಕ್ರಮಗಳು :
ಎ) ಅರಣ್ಯನಾಶವನ್ನು ತಡೆಗಟ್ಟುವುದು.
ಬಿ) ಅರಣ್ಯೀಕರಣವನ್ನು ಪ್ರೋತ್ಸಾಹಿಸುವುದು.
ಸಿ) ಜಾನುವಾರುಗಳ ಅತಿಯಾದ ಮೇಯುವಿಕೆಯನ್ನು ತಡೆಗಟ್ಟುವುದು.
ಡಿ) ಮಿಶ್ರಬೆಳೆ ಮತ್ತು ಸರದಿ ಬೆಳೆಗಳನ್ನು ಬೆಳೆಯುವುದು.
ಇ) ಇಳಿಜಾರು ಪ್ರದೇಶಗಳಲ್ಲಿ ಉಳುಮೆ ಮಾಡುವಾಗ ಉದ್ದ ಸಾಲುಗಳನ್ನು ಮಾಡದೆ ಅಡ್ಡ ಸಾಲುಗಳನ್ನು ಮಾಡುವುದು.
ಎಫ್) ಹೊಲಗಳಿಗೆ ಬದುಗಳನ್ನು ನಿರ್ಮಿಸುವುದು.

24.

